International Journal of Kannada Research 2025; 11(4): 06-14

International Journal of Kannada Research
www.kannadajournal.com

ISSN: 2454–5813
IJKR 2025; 11(4): 06-14
© 2025 IJKR
www.kannadajournal.com
Received: 08-08-2025
Accepted: 11-09-2025

**ಐಶ್ವರ್ಯ ಎಂ**
ಸಹಾಯಕ ಪ್ರಾಧ್ಯಾಪಕಿ
ಗೋಪಾಲನ್ ಕಾಲೇಜ್, ಹೂಡಿ,
ಬೆಂಗಳೂರು, ಕರ್ನಾಟಕ,
ಭಾರತ

**Corresponding Author:**
**ಐಶ್ವರ್ಯ ಎಂ**
ಸಹಾಯಕ ಪ್ರಾಧ್ಯಾಪಕಿ
ಗೋಪಾಲನ್ ಕಾಲೇಜ್, ಹೂಡಿ,
ಬೆಂಗಳೂರು, ಕರ್ನಾಟಕ,
ಭಾರತ

# ಕುವೆಂಪು ಅವರ ಶೂದ್ರತಪಸ್ವಿ ನಾಟಕದಲ್ಲಿ ವರ್ಣ ಸಂಘರ್ಷ

**ಐಶ್ವರ್ಯ ಎಂ**

**ಪೀಠಿಕೆ**

ಅಂಚಿನ ಪಾತ್ರಗಳನ್ನು ಕೇಂದ್ರ ಪಾತ್ರದ ಸ್ಥಾನಕ್ಕೆ ಕೊಂಡೊಯ್ಯುವ ಮೂಲಕ ತುಳಿತ ವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸಿಕೊಡುವಲ್ಲಿ ಕುವೆಂಪು ರವರು ಸಿದ್ಧ ಹಸ್ತರು. ಸಾಮಾನ್ಯವಾಗಿ ಅವರ ಬಹುತೇಕ ಬರವಣಿಗೆಗಳಲ್ಲಿ ಇದನ್ನು ಕಾಣಬಹುದು.

ಶತಶತಮಾನಗಳಿಂದಲೂ ತುಳಿತಕ್ಕೆ ಒಳಗಾಗಿರುವ ಶ್ರಮಿಕ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸ ಹೊರಟಿರುವುದನ್ನು ಈ ನಾಟಕದಲ್ಲಿ ಕಾಣಬಹುದಾಗಿದೆ. ಸಮಾಜದಲ್ಲಿ ಮೇಲು ಕೀಳಿನ ಕಲ್ಪನೆ ತೊಲಗಬೇಕು ಇಲ್ಲಿ ಎಲ್ಲರೂ ಸಮಾನರು ಎಂಬ ಭಾವನೆ ಬಿತ್ತುವಂತಹ ಪ್ರಯತ್ನ ಇಲ್ಲಿದೆ. ಜನರಲ್ಲಿ ಜಾತಿ ಕುಲ ಭೇದವಿಲ್ಲದ ಸಾಮರಸ್ಯದ ಜೀವನವೇ ಇವರ ಅಂತಿಮ ಉದ್ದೇಶವಾಗಿದೆ.

ಈ ನಾಟಕದಲ್ಲಿ ರಾಮಾಯಣದ ಉತ್ತರ ಕಾಂಡದಲ್ಲಿ ಬರುವ ಶಂಭೂಕನೆಂಬ ಶೂದ್ರ ತಪಸ್ವಿಯ ಬಗ್ಗೆ ಹೇಳಿದ್ದಾರೆ. ಈ ಶಂಭೂಕ ಹುಟ್ಟಿನಿಂದ ಕೆಳ ಜಾತಿಗೆ ಸೇರಿರುವಂತಹ ವ್ಯಕ್ತಿ. ಆತನ ತಪಸ್ಸಿನಿಂದಾಗಿ ಆಗುವಂತಹ ಅನಾಹುತಗಳನ್ನು ಕುರಿತು ಬ್ರಾಹ್ಮಣ ರಾಮನಲ್ಲಿ ಹೇಳುವ ದೂರು ಈ ಒಂದು ನಾಟಕದ ಮುಖ್ಯ ವಸ್ತು.

ಈ ನಾಟಕದಲ್ಲಿ ಬರುವ ಪಾತ್ರಗಳು ಭೈರವ, ಮೃತ್ಯು, ಬ್ರಾಹ್ಮಣ, ಶ್ರೀರಾಮ, ಕುಮಾರ ಹಾಗೂ ಶಂಭೂಕ.

**ದೃಶ್ಯ – ಒಂದು, ಮೃತ್ಯುದೇವತೆ ಮತ್ತು ವೃಕ್ಷಭೈರವನ ನಡುವೆ ಸಂವಾದ :**

ಶ್ರೀ ರಾಮನು ಆಳ್ವಿಕೆ ಮಾಡುತ್ತಿರುವ ಅಯೋಧ್ಯಾ ಸಾಮ್ರಾಜ್ಯದಲ್ಲಿ ಈ ನಾಟಕ ನಡೆಯುತ್ತಿದೆ. ಶ್ರೀ ರಾಮನ ಆಳ್ವಿಕೆ ನಡೆಸುತ್ತಿರುವ ಸಾಮ್ರಾಜ್ಯದಲ್ಲಿ ಶಂಭೂಕ ವನವಿದ್ದು, ಅಲ್ಲಿ ಶಂಭೂಕ ಋಷಿಯ ಆಶ್ರಮವು ಕೂಡ ಇದೆ.

ಅಲ್ಲಿ ಬೃಹದಾಕಾರವಾದ ಮರವು ಇದೆ. ಇದು ಆಶ್ರಮದ ಮಹದ್ವಾರದಲ್ಲಿ ಕಾವಲು ನಿಂತಿರುವಂತಿದೆ. ಶಂಭೂಕ ಋಷಿಯು ಇರುವ ವನವು ನೋಡಲು ಸುಂದರವಾಗಿದೆ. ಶಾಂತಿಯ ತವರು ಮನೆಯಂತೆ ಇದೆ. ಸುತ್ತಲೂ ತಂಗಾಳಿ ಬೀಸುತ್ತಿರುತ್ತದೆ.

ಹಕ್ಕಿಯು ಚೀರಾಡುವದು ಮೈ-ಮನಸ್ಸಿಗೆ ಮುದ ನೀಡುವಂತಿದೆ. ಪ್ರಾಣಿ ಪಕ್ಷಿಗಳು ದಿಕ್ಕು ದಿಕ್ಕಿಗೆ ಓಡಾಡುತ್ತಿದೆ. ಈ ವನದ ಮುಂಭಾಗದಲ್ಲಿ ಆ ಮಹಾ ವೃಕ್ಷವು ತುಂಬಾ ಸುಂದರವಾಗಿ ಗೋಚರಿಸುತ್ತಿದೆ. ಆ ಆಶ್ರಮದಲ್ಲಿ ಶಂಭೂಕ ಮಹರ್ಷಿಯು ತಪಸ್ಸನ್ನು ಆಚರಿಸುತ್ತಿದ್ದಾನೆ. ಈ ಶಂಭೂಕ ಮಹರ್ಷಿ ಜಾತಿಯಿಂದ ಶೂದ್ರ ಜಾತಿಯವನಾಗಿದ್ದಾನೆ. ಅವನು ವಾಸಿಸುತ್ತಿದ್ದ ಆ ಜಾಗಕ್ಕೆ ತಪೋವನ ಎಂತಲೂ ಕರೆಯುವರು. ಆ 'ಜಾಗದಲ್ಲಿ ಒಂದು ಬೃಹದಾಕಾರವಾದ ಮರವು ಕಾಣಿಸುತ್ತದೆ ಆತನೇ ವೃಕ್ಷಭೈರವನಾಗಿದ್ದಾನೆ. ಗಾಳಿಯ ರಭಸಕ್ಕೆ ಧೂಳು ಎದ್ದು ಎಲೆಗಳು ಉದುರಿ ಇದ್ದಕ್ಕಿದ್ದಂತೆ ವನವೆಲ್ಲವೂ ಮಸುಕಾಗುತ್ತದೆ, ವಟತರುವು ಮಂಜು ಮಂಜಾಗಿ ಮಾಯಾವಾದಂತೆ ಕಾಣಿಸುತ್ತಿದೆ. ಆ ಮರವು ಭೀಮ ಆಕಾರದಲ್ಲಿ ಬೆಳೆದು ನಿಂತಿದೆ. ಅಲ್ಲಿ ಒಬ್ಬ ವೃಕ್ಷಭೈರವನು ಕಾಣಿಸುತ್ತಾನೆ. ತರುಗಳ ಶಾಖೆಗಳಂತಿರುವ ಬಹುಸಂಖ್ಯೆಯ ತೋಳುಗಳಲ್ಲಿ ತ್ರಿಶೂಲದ ಆಕಾರದ ಸಾಲು ಕಾಣಿಸುತ್ತಿದೆ. ಸೇನಾ ವ್ಯೂಹದಂತೆ ಗೋಚರಿಸುತ್ತಾ ಭಯಂಕರವಾಗಿ ಉರಿಗಣ್ಣನ್ನು ಸುತ್ತಲೂ ಹೊರಳಿಸಿ ನೋಡುತ್ತಾನೆ. ತನಗೆ ಸಾಟಿ ಯಾರಿಲ್ಲವೆಂಬಂತೆ ಮೊಳಗುತ್ತಾನೆ. ಭೈರವನು ಶಂಬೂಕ ಋಷಿಯು ತಪಸ್ಸು ಮಾಡುತ್ತಿದ್ದಾಗ ಧರ್ಮ ದೇವತೆಯ ಆಜ್ಞೆಯಂತೆ ವನವನ್ನು ಕಾಯುತ್ತಿದ್ದಾನೆ. ಶಂಭೂಕನ ತಪಸ್ಸಿಗೆ ಭಂಗ ಬಾರದಂತೆ ವೃಕ್ಷಭೈರವನು ಅರಣ್ಯವನ್ನು ಕಾಯುತ್ತಿದ್ದಾನೆ. ಇಲ್ಲಿ ಶಂಭೂಕನ ರಕ್ಷಣೆಗೆ ಭೈರವನು ಕಾವಲಿದ್ದಾನೆ.

ಆ ಸಮಯದಲ್ಲಿ ಮೃತ್ಯುದೇವನ ಆಗಮನವಾಗುತ್ತದೆ. ಇವನ ಆಗಮನದಿಂದ ವನವೆಲ್ಲವೂ ಕಪ್ಪಾದಂತೆ ಕಾಣಿಸುತ್ತಿದೆ, ಶೂನ್ಯವಾದ ಬಯಲಿನಂತೆ ಗೋಚರಿಸುತ್ತಿದೆ. ಅಲ್ಲಿರುವ ವನವೆಲ್ಲವೂ ತರತರನೆ ನಡುಗುತ್ತಿದೆ, ಪಕ್ಷಿಗಳು ಕಿರುಚಾಡುತ್ತಿವೆ. ಮೃಗ ಸಮೂಹಗಳು ದೆಸೆದೆಸೆಗೆ ಓಡುತ್ತಿವೆ. ಏನು ಕಾರಣ ಪರೀಕ್ಷಿಸಬೇಕು ಎನ್ನುತ್ತಾ ನೋಡಿದಾಗ ಇಡೀ ವನವೆಲ್ಲವೂ ಕರಿಮಂಜಿನ ಹಾಗೆ ಆವರಿಸಿಕೊಂಡಿದೆ. ಕಪ್ಪು ಮುಸುಕಿದಂತೆ ಭಾಸವಾಗುತ್ತಿದೆ. ಆ ವನದಲ್ಲಿ ಮೃತ್ಯು ದೇವತೆಯ ಕರಾಳ ಆಕೃತಿ ಕಾಣಿಸುತ್ತಿದೆ. ಭೈರವನು ವನದೇವತೆಯನ್ನು ಪ್ರಶ್ನಿಸುತ್ತಾನೆ.

ಯಾರು ನೀನು? ನಿನಗೆ ಇಲ್ಲಿ ಕೆಲಸವೇನು? ಎಂದು ಭೈರವನು ಮೃತ್ಯು ದೇವತೆಯನ್ನು ಕೇಳುತ್ತಾನೆ. ಆಗ ಮೃತ್ಯು ದೇವನು ನಾವು ಮೃತ್ಯು, ಈ ತಪೋವನವನ್ನು ಪ್ರವೇಶಿಸಲು ಬಂದಿದ್ದೇನೆ ಎನ್ನುತ್ತಾನೆ. ಆಗ ಭೈರವನು ಈ ತಪೋವನ ಅಮೃತ ಕ್ಷೇತ್ರವಾಗಿದೆ. ನಿನ್ನನ್ನು ಒಂದು ಹೆಜ್ಜೆಯೂ ಕೂಡ ಮುಂದಿಡದ ಹಾಗೆ ನಾನು ತಡೆಯಬಲ್ಲೆ, ಮುಂದುವರಿದರೆ ಈ ನನ್ನ ತೋಳುಗಳ ತ್ರಿಶೂಲ ಸಾಲುಗಳಿಂದ ಗುರಿಯನ್ನು ಅಟ್ಟಿಸಿಕೊಂಡು ಹೋಗುವ ಹಾಗೆ ನಿನ್ನನ್ನು ನಿನ್ನ ಆಲಯಕ್ಕೆ ಅಟ್ಟುತ್ತೇನೆ ಎಂದು ಹೇಳುತ್ತಾನೆ. ಮೃತ್ಯು ಭೈರವನ ಮಾತನ್ನು ಕೇಳಿ ನಾನೇ ಲಯ ನನಗೆಲ್ಲಿಯ ಲಯ ಎನ್ನುತ್ತಾರೆ. ಮೃತ್ಯು ಮುಂದೆ ನುಗ್ಗಲು ಪ್ರಯತ್ನಿಸಿದಾಗ ಭೈರವನು "ಮಹರ್ಷಿ ಶಂಭೂಕ ದೇವನ ಆಣೆ" ಕಲ್ಲ ಹಾಗೆ ನೀನು ಅಲ್ಲೇ ನಿಲ್ಲು ಎಂದು ಹೇಳುತ್ತಾನೆ. ತನ್ನ ತೋಳುಗಳಲ್ಲಿ ಹೊಳೆಯುವ ತ್ರಿಶೂಲಗಳನ್ನು ಮೃತ್ಯುವಿನ ಮುಂದೆ ಅಡ್ಡ ಹಾಕುತ್ತಾನೆ. ಆಗ ಮೃತ್ಯು "ಎಲೆ ಮರುಳೇ ಕೇಳು ಶಂಭೂಕ ಋಷಿಯ ಗೌರವಕ್ಕಾಗಿ ಧರ್ಮದೇವತೆಯ ಆಜ್ಞೆಯಿಂದ ನಾನು ಬಂದಿದ್ದೇನೆ. ನೀನು ಆತನ ದೇಹದ ಕಾವಲಾದರೆ ನಾನು ಉಸಿರಿಗೆ ಕಾವಲಾಗಿದ್ದೇನೆ". ಇದನ್ನು ತಿಳಿದು ದಾರಿ ಬಿಡು ಎಂದು ಮೃತ್ಯು ಹೇಳುತ್ತದೆ. ಭೈರವನು ಮೃತ್ಯುವಿನ ಮಾತನ್ನು ಒಪ್ಪದೆ ಮತ್ತಷ್ಟು ಮಾತುಕತೆ ಅವರಿಬ್ಬರಲ್ಲಿ ನಡೆಯುತ್ತದೆ. ಆನಂತರ ಮೃತ್ಯು ಭೈರವನನ್ನು ಪ್ರಶ್ನಿಸುತ್ತದೆ. "ಇಂದು ಬೆಳಗ್ಗಿನಿಂದ ಯಾರು ಯಾರಿಗೆ ಈ ವನಕ್ಕೆ ಪ್ರವೇಶವನ್ನು ಕೊಟ್ಟಿದ್ದೀಯಾ ಹೇಳು" ಎಂದು ಕೇಳಲು ಭೈರವನು ಉತ್ತರಿಸುತ್ತಾನೆ. ಸೂರ್ಯದೇವನ ಕಿರಣಗಳಿಗೆ, ಶ್ರೀರಾಮಚಂದ್ರನ ಕೀರ್ತಿ ಕಾಂತಿಗೆ, ಪ್ರಕೃತಿ ದೇವಿಯ ದೈನಂದಿನ ಪರಿವಾರಕ್ಕೆ, ಎಂದು ಹೇಳುತ್ತಾ ಬ್ರಾಹ್ಮಣನೊಬ್ಬನು ತನ್ನ ಮಗನ ಜೊತೆಗೆ ಪೂಜೆಗಾಗಿ ಹೂವನ್ನು ಸಂಗ್ರಹಿಸಲು ಒಳಹೋದನು" ಎಂದು ಹೇಳುತ್ತಾನೆ.

ಆತನ ಮಾತನ್ನು ಕೇಳುತ್ತಾ ಮೃತ್ಯು ಆದೇ ಕಾರಣಕ್ಕಾಗಿ ನಾನು ಬಂದಿದ್ದೇನೆ. ಅವನು ಅಧರ್ಮವನ್ನು ಮಾಡಿದ್ದಾನೆ. ಅವಜ್ಞೆಯಿಂದ ಋಷಿಗೆ ನಿನ್ನ ಗುರುದೇವನಾದ ಶಂಭೂಕ ಋಷಿಗೆ ಅಧರ್ಮವನ್ನು ಮಾಡಿದ್ದಾನೆ- ಎಂದು ಹೇಳುತ್ತಾ ಹುಟ್ಟಿನಿಂದಲೂ ಶೂದ್ರ ಜಾತಿಗೆ ಸೇರಿದವನು ಶಂಭೂಕ ಋಷಿ ಎಂದು ಅವನ ತಪಸ್ಸು ಭಂಗ ಮಾಡಲು ಬಂದಿದ್ದಾನೆ. ಈ ರೀತಿಯ ಅಧರ್ಮವನ್ನು ಆ ಬ್ರಾಹ್ಮಣನು ಮಾಡಿದ್ದಾನೆ ಎಂದು ಹೇಳುತ್ತಾರೆ. ಈ ಮಾತನ್ನು ಕೇಳಿದ ಮೇಲೆ

ಭೈರವನು ತನ್ನ ಶೂಲಗಳ ಬೇಲಿಯನ್ನು ತೆಗೆಯುತ್ತಾನೆ. ಶಿವಶಿವಾ ಏನು ಭಯಂಕರವಾದ ಪಾಪ ಸಂಭವಿಸಿದೆ ಶ್ರೀರಾಮನು ಆಳುತ್ತಿರುವ ಸಾಮ್ರಾಜ್ಯದಲ್ಲಿ ಧರ್ಮದ ರಾಜ್ಯದಲ್ಲಿ ಅಧರ್ಮ ಉಂಟಾಯಿತೆ ಎಂದುಕೊಳ್ಳುತ್ತಾನೆ. ಮೃತ್ಯುವೂ ಕರಿ ಮಂಜಾಗಿ ಆಶ್ರಮದ ಕಡೆಗೆ ಮೆಲ್ಲ ಮೆಲ್ಲನೆ ಚಲಿಸುತ್ತಾ ನಡೆಯುತ್ತಿರಬೇಕಾದರೆ ಭೈರವನು ಮಾತ್ರ ಮತ್ತೆ ವ್ಯಕ್ತರೂಪಿಯಾಗಿ ನಿಲ್ಲುತ್ತಾನೆ ಅಲ್ಲಿಗೆ ಮೊದಲನೇ ದೃಶ್ಯ ಮುಗಿಯುತ್ತದೆ.

**ದೃಶ್ಯ : ಎರಡು, ಬ್ರಾಹ್ಮಣನು ಶ್ರೀರಾಮನ ಅರಮನೆಯ ಬಳಿ ಗೋಳಾಡುವುದು**

ಶ್ರೀರಾಮಚಂದ್ರನ ಅರಮನೆಯ ಹತ್ತಿರವಿರುವ ಉದ್ಯಾನವನದಲ್ಲಿ ಬ್ರಾಹ್ಮಣನೊಬ್ಬನು ಹುಯ್ಯಲಿಡುತ್ತಾ, ಗೋಳಾಡುತ್ತಾ, ರೋಧಿಸುತ್ತಾನೆ. ಸುತ್ತಲೂ ಬಹಳ ದೂರದವರೆಗೂ ಆ ರೋಧನೆ ಕೇಳಿಸುತ್ತದೆ. ತನ್ನ ಕಂದನ ಸಾವಿಗಾಗಿ ಬಗೆ ಬಗೆಯಾಗಿ ಮರುಗುತ್ತಿದ್ದಾನೆ. "ನಿನ್ನ ಆಗಲಿಕೆಯನ್ನು ಹೇಗೆ ಸಹಿಸಲಿ ಮಗನೇ, ನೀನು ನನ್ನ ಕಣ್ಣಿಗೆ ಬೆಳಕಾಗಿದ್ದೆ, ಬಾಳಿಗೆ ಉಸಿರಾಗಿದ್ದೆ, ನನ್ನ ಮುದಿತನಕ್ಕೆ ಊರುಗೋಲಾಗಿದ್ದೆ. ನೀನು ಹೋದ ನಂತರ ಸರ್ವವೂ ಕಳಚಿ ಬಿದ್ದಂತಾಗಿದೆ" ಎನ್ನುತ್ತಾ ರೋಧಿಸುತ್ತಾನೆ.

"ಪುತ್ರ ಶೋಕ ನಿರಂತರಮ್" ಎಂಬಂತೆ ದುಃಖಿಸುತ್ತಾನೆ. ಬ್ರಾಹ್ಮಣನು ಪರಿಪರಿಯಾಗಿ ದುಃಖಿಸುತ್ತಾ ಏಳು ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳುತ್ತಾನೆ. "ಹೋದ ಜನ್ಮದಲ್ಲಿ ಯಾವ ಕೆಟ್ಟ ಕೆಲಸವನ್ನು ಮಾಡಿದೆನೋ ನನ್ನ ಬಾಳಿನಲ್ಲಿ ಪಡೆದ ಒಬ್ಬನೇ ಮಗನು ಅಪ್ರಾಪ್ತ ವಯಸ್ಸಿನಲ್ಲಿ ನನ್ನನ್ನು ಬಿಟ್ಟು ಆಗಲಿದನು. 5 ವರ್ಷ ವಯಸ್ಸಿನ ನನ್ನ ಮಗನು ಯಾವ ಕಾರಣದಿಂದ ಹೀಗೆ ರಾಮ ರಾಜ್ಯವನ್ನು ಬಿಟ್ಟು ಯಮರಾಜ್ಯಕ್ಕೆ ಹೋದನೋ, ನಾನು ಮಾಡಿದ ಪಾಪವಾದರೂ ಏನು ನನಗೆ ನೆನಪು ಆಗುತ್ತಿಲ್ಲ. ನಾನು ಯಾವ ಹಿಂಸೆಯನ್ನು ಯಾವ ಜೀವಿಗೂ ಮಾಡಿದವನಲ್ಲ, ಹಾಗಾದರೆ ಯಾವ ದುಷ್ಕೃತ್ಯಕ್ಕೆ ಇಂದು ನನ್ನ ಕಂದನ ಸಾವಾಯಿತು" ಎನ್ನುತ್ತಾ ಅತಿಯಾದ ದುಃಖದಿಂದ ಗೋಳಾಡುತ್ತಾನೆ.

"ಬೆಳದಿಂಗಳೇ, ಇರುಳೇ ನೀನು ಹೇಳು ನಾನು ಯಾವ ದುಷ್ಕೃತ್ಯವನ್ನು ಮಾಡಿರುವೆನು ರಾಮ ರಾಜ್ಯದಲ್ಲಿ ರಾಮ ಪ್ರಜೆಗೆ ಕುಂದು ಬಂದಿದೆಯಲ್ಲ, ಪ್ರಜೆಯ ಸಂಕಟಕ್ಕೆ ದೊರೆಗಳ ದೋಷವೇ ಕಾರಣ. "ರಾಮ ರಾಜ್ಯದಲ್ಲಿ ಕುಲಹೀನನಾದ ವ್ಯಕ್ತಿ ತಪಸ್ಸು ಮಾಡುತ್ತಿರುವುದೇ ಇದಕ್ಕೆ ಕಾರಣ ಶೂದ್ರನ ತಪಸ್ಸಿಗೆ ಮುನಿದ ಧರ್ಮದ ಶಾಪವಿದು" ಎಂದು ದಿಟ್ಟ ದನಿಯಿಂದ ಮಾತನಾಡುತ್ತಾ ಮಗನನ್ನು ಬದುಕಿಸಿಕೊಡದಿದ್ದರೆ ಓ ರಾಮಚಂದ್ರ ನಿನ್ನ ಅರಮನೆಯ ಬಾಗಿಲಿನಲ್ಲಿಯೇ ಸಾಯುತ್ತೇನೆ. ಆಗ ಬ್ರಹ್ಮಹತ್ಯೆ ದೋಷ ನಿನಗೆ ತಗುಲುತ್ತದೆ. ಮತ್ತಷ್ಟು ಗಟ್ಟಿಯಾಗಿ ಈ ಒಂದು ಮಾತಿಗೆ ಆಕಾಶ ಚಂದ್ರ ಅಯೋಧ್ಯೆ ನೀವುಗಳೇ ಸಾಕ್ಷಿ ಸ್ವರ್ಗದಲ್ಲಿ ಇರುವ ಸೂರ್ಯವಂಶದ ಅರಸರೆ ನೀವೆಲ್ಲರೂ ನನ್ನ ಮಾತಿಗೆ ಸಾಕ್ಷಿಗಳು ಎಂದು ಹೇಳುತ್ತಾ ಕುಸಿಯುತ್ತಾನೆ.

"ನಿಮ್ಮ ದರ್ಶನವೂ ಧನ್ಯವಾದುದು. ಮೂರು ಲೋಕಕ್ಕೆ ಹೊಳಪನ್ನು ಉಂಟು ಮಾಡತಕ್ಕದ್ದು, ನಿಮ್ಮ ದೇಹ ಕಾಂತಿ ವಿಶಾಲವಾಗಿದೆ. ದಶರಥ ಪುತ್ರನ ಆಗಮನದಿಂದ ಸನ್ಮಂಗಳ ಉಂಟಾಗುತ್ತಿದೆ. ನೀವು ರಘು ಶ್ರೇಷ್ಠರಾಗಿದ್ದೀರಿ, ಕೌಸಲ್ಯ ಪುತ್ರನೇ ನೀವು ಕರುಣಾಮೂರ್ತಿಯಾಗಿದ್ದೀರಿ, ಶಿವ ಧನಸ್ಸನ್ನು ಮುರಿದ ನೀವು ಸುರಧನುವಿನ ಹಾಗೆ ಸುಂದರವಾದವರು ಎನ್ನುತ್ತಾನೆ. ಮೈಥಿಲಿಯ ಮನೋಹರರು, ನೀವು ನೀಲ ಮೇಘಶಾಮನು, ಗಿರಿವನ ಪ್ರಿಯನು ದಶಗ್ರೀವ ಶತ್ರು ಅಂಜನಾ ಸುತನ ಹೃದಯ ಮಿತ್ರನು, ಪವಿತ್ರನು ಪಂಚವಟಿಯಲ್ಲಿ ನಿಂತವನು, ಗೋದಾವರಿಯಲ್ಲಿ ಮಿಂದು ಎದ್ದವನು, ದೈತ್ಯ ಕೋಟಿಯನ್ನು ಕೊಂದವನು, ಶಬರಿಯ ಕೈಯ ಹಣ್ಣುಗಳನ್ನು ತಿಂದವನು. ಮೇರು ಭವ್ಯನು, ಪ್ರೇಮ ಮೂರ್ತಿಯು, ಧರ್ಮ ಮೂರ್ತಿಯು, ಕ್ಷಮಾಮೂರ್ತಿಯು, ದುಷ್ಟ ಶಿಕ್ಷಣ ಮೂರ್ತಿಯು, ನೀವು ದೇವರೇ ಸರಿ, ನಿಮ್ಮ ಆಶೀರ್ವಾದವನ್ನು ಪಡೆದ ನಾನೇ ಧನ್ಯ ಬದುಕಿದೆ ಬದುಕಿದೆ.

ರಾವಣನು ಮುಂದೆ ವ್ಯಂಗ್ಯಸ್ಥಿತನಾಗಿ 'ನನ್ನ ಬಾಳಿನ ಕಿವಿಗಳಿಗೆ ಯಾವಾಗಲೂ ರೋದನವೇ ಸಂಗೀತವಾಯಿತಲ್ಲಾ! ಅವತಾರಿ ಎನ್ನುವ ಕೂಳಲ್ಲವೇ ಗೋಳು : ಕುಡಿಯುವ ಅಮೃತವಲ್ಲವೇ ಕಣ್ಣೀರು !' ಎಂದನು. ತನ್ನೆಡೆಗೆ ಬರುತ್ತಿರುವ ಬ್ರಾಹ್ಮಣನನ್ನು ಗಮನಿಸಿ 'ಯಾರೋ ಈ ಕಡೆಗೆ ಬರುತ್ತಿದ್ದಾರೆ' ಎಂದು ನಿಟ್ಟಿಸಿ ನೋಡಿ 'ಮುದುಕ: ಬ್ರಾಹ್ಮಣ, ದುಃಖ ಜರ್ಜರಿತ : ಹಾಗೆ ಹುಯ್ಯಲಿಟ್ಟವನು ಈತನೇ ಇರಬೇಕು' ಎಂದು ಎರಡು ಹೆಜ್ಜೆ ಮುಂದೆ ಬರುತ್ತಾನೆ. ಬ್ರಾಹ್ಮಣನು ಬೇಗ ಬೇಗ ಬರುತ್ತಾ ಅನಾಥರಕ್ಷಕಾ,

ದುಃಖವಿಮೋಚಕಾ, ಸರ್ವಲೋಕಪ್ರಭೂ, ಸಲಹು, ಸಲಹು !' ಎಂದು ಕಾಲಿಗೆ ಬೀಳುತ್ತಾನೆ. ಶ್ರೀರಾಮನು 'ಏಳಿ, ಏಳಿ, ಮುದುಕರು, ಹಿರಿಯರು,ಬ್ರಾಹ್ಮಣರು, ನೀವು ನನಗೆ ಗುರುವಿನ ಸಮಾನರು' ಎನ್ನುತ್ತಾನೆ.

ರಾಮನು 'ನೀವು ಯಾರು? ದುಃಖವೇನು? ಎಂದು ಕೇಳುತ್ತಾನೆ. 'ಬ್ರಾಹ್ಮಣನು' ನೀನು ವಿಚಾರಿಸಿದರೆ ದುಃಖ ಎನ್ನುವುದು ಉಂಟೆ? ಕಾಲವನ್ನೇ ಕೂಸು ಎನ್ನುವ ನಿನಗಿಂತ ವೃದ್ಧರು ಇದ್ದಾರೆಯೆ? ವಿಶ್ವವನ್ನೇ ಸೃಷ್ಟಿಸಿದವನು ನೀನು ಎನ್ನುತ್ತಾನೆ. ಆ ಹಿರಿಯನಿಗೆ ಹಿರಿಯನಾದ ನಿನಗೆ ನಾನು ನಮಸ್ಕಾರ ಮಾಡಿದರೆ ವಿಪರೀತವಾಗುವುದಿಲ್ಲ. ಮನುಷ್ಯ ರೀತಿಯಿಂದಲೂ ನಿನಗೆ, ಪೊಡವಿಯ ಒಡೆಯನಿಗೆ ನಮಸ್ಕರಿಸುವುದೇ ಸರಿ.

ಪ್ರೇಮ ಸಾಧನ ದಿಂದ ನೀನು ಮಹಾತಪಸ್ವಿಯಲ್ಲವೆ? ಯಾವಾಗಲೂ ತಪಸ್ಸು ದೊಡ್ಡದು. ಗುಣಕ್ಕೆ ಮತ್ಸರವೆ?' ಎನ್ನುತ್ತಾನೆ. ಅದಕ್ಕೆ ಶ್ರೀರಾಮನು 'ಹಿಂದಾದವನ್ನು ಅರಿಯುವವರು ಹಿರಿಯರೆ, ಬ್ರಾಹ್ಮಣರೇ ! ನಿಮ್ಮ ಸಂಕಟವನ್ನು ಹೇಳಿ' ಎನ್ನುತ್ತಾನೆ. ಆಗ ಬ್ರಾಹ್ಮಣನು 'ಐದು ವರ್ಷದ ನನ್ನ ಕಂದನನ್ನು ಅಪಹರಿಸಿದನು' ಎಂದಾಗ 'ಆ ನೀಚ ಯಾರು?' ಎಂದು ರಾಮನು ಕೇಳುತ್ತಾನೆ. ಬ್ರಾಹ್ಮಣನು 'ಯಮ ಎಂಬ ಕೀರ್ತಿಯ ವೈವಸ್ವತನು' ಎನ್ನುತ್ತಾನೆ. 'ದಿಟವೇ?' ಎಂದಾಗ 'ನನ್ನೊಡನೆ ಬರುವೆಯಾದರೆ ಆ ಸ್ಥಾನವನ್ನು ತೋರಿಸುತ್ತೇನೆ. ಮತ್ತು ನನ್ನ ಒಬ್ಬನೇ ಮಗನ ಹೆಣವನ್ನೂ ತೋರಿಸುತ್ತೇನೆ' ಎನ್ನುತ್ತಾ ಅಳತೊಡಗುತ್ತಾನೆ. ಅಳುತ್ತಾ 'ಹೇ ದಯಾನಿಧಿ, ಕಷ್ಟದ ಕಾಲದಲ್ಲಿ ಎಲ್ಲರೂ ನಿನ್ನ ಹೆಸರು ಹೇಳಿ ರಕ್ಷೆಯನ್ನು ಪಡೆಯುತ್ತಾರೆ. ನಿನ್ನನ್ನೇ ನಾನು ಬೇಡುತ್ತಿದ್ದೇನೆ. 'ನನ್ನ ಕಂದನ ಪ್ರಾಣವನ್ನು ನನಗೆ ಭಿಕ್ಷೆ ನೀಡು' ಎಂದು ಬ್ರಾಹ್ಮಣ ಕೇಳುತ್ತಾನೆ. ನಿನಗೆ ಎಂತಹ ಕಠಿಣ ಕೆಲಸವಾದರೂ ಸುಲಭಸಾಧ್ಯ. "ಲೋಕಾಪವಾದಕ್ಕೆ ನಿನ್ನ ಅರ್ಧಾಂಗಿಯನ್ನು, ಬೆಂಕಿ ಹೊಕ್ಕು ಹೊರಕ್ಕೆ ಬಂದ ಪರಿಶುದ್ಧೆಯನ್ನು, ಸೌಂದರ್ಯಲಕ್ಷ್ಮಿ ಆ ಸೀತಾದೇವಿಯನ್ನು, ತುಂಬು ಬಸಿರಿಯೆಂದು ಎದೆಕರಗದೆ ಅಡವಿಗೆ ಅಟ್ಟಿ ನಿನ್ನ ಆ ಭೀಷ್ಮ ಪೌರುಷವನ್ನು ಮೆರೆದೆಯಲ್ಲವೆ ?" ಎಂದು ಕೇಳುತ್ತಾನೆ. ರಾಮನು ನಿಡುಸುಯ್ದು ಮೊಗವನ್ನು ಹಿಂಡಿ, 'ಆ ಕಥನ ಸಾಕು, ದ್ವಿಜನ್ಮ (ಬ್ರಾಹ್ಮಣರೇ), ಕಾಡುಕಿಚ್ಚಿಗೆ ಉರುಕಿಚ್ಚನ್ನು ಇದಿರು ಒಡ್ಡಿ ಆರಿಸುವ ಹಾಗೆ ನಿನ್ನ ನೋವಿಗೆ ನನ್ನ ನೋವು ಪರಿಹಾರವೇನು?' ಎನ್ನುತ್ತಾನೆ. ಬ್ರಾಹ್ಮಣನು 'ಮನ್ನಿಸು. ಮಹೀಶ್ವರ, ನನ್ನ ಕಂದನ ಹೆಣವನ್ನು ಬೇಡಿ ಬಂದೆನು; ಕೃಪೆಯಿಂದ ಅದನ್ನು ನೀಡು' ಎಂದು ಕೇಳುತ್ತಾನೆ.

ಶ್ರೀರಾಮನು 'ದ್ವಿಜೋತ್ತಮ', ನೀನು ಹೇಳುವುದು ಆಶ್ಚರ್ಯ, ಧರ್ಮಾಧಿಕಾರಿಯಾದ ಯಮದೂತನು ಸುಮ್ಮ ಸುಮ್ಮನೆ ನನ್ನ ರಾಜ್ಯದಲ್ಲಿ ಹೀಗೆ ಮಾಡತಕ್ಕವನಲ್ಲ. ಇದರಲ್ಲಿ ಒಂದೇನೊ ಧರ್ಮ ಚ್ಯುತಿ ಇರಲೇಬೇಕು. ಅಪ್ರಾಪ್ತನನ್ನು, ಬಾಲಕನನ್ನು ಕೊಂಡುಹೋದ ಆ ಕಾಲ(ಯಮ)ವನ್ನು ಬಿಡುವುದಿಲ್ಲ. ತಪ್ಪು ಅವನದ್ದೇ ಆಗಿದ್ದರೆ ಕಾಡಿಸುತ್ತೇನೆ. ಆದರೆ ಅಪರಾಧವು ಅವನದು ಎಂದು ಆಲೋಚಿಸುವುದಿಲ್ಲ. 'ನೀವು ಏನಾದರೂ ಅಪೂಜ್ಯವನ್ನು ಮಾಡದಿರೇನು?' ಎಂದು ಕೇಳುತ್ತಾನೆ. ಬ್ರಾಹ್ಮಣನು 'ನನ್ನ ತಾಯಿತಂದೆಯರು ದೊಡ್ಡ ನಡತೆಯವರು. ವಿದ್ಯೆ ಕಲಿಸಿದ ಉಪಾಧ್ಯಾಯರು ಸಜ್ಜನರು, ಪ್ರಭು, ನನ್ನ ಆತ್ಮ ಬ್ರಾಹ್ಮಣರಲ್ಲಿ ಹುಟ್ಟಿದೆ' ಎನ್ನುತ್ತಾನೆ. ರಾಮನು 'ನೀವು ಧನ್ಯರು, ನಿಮ್ಮಂತಹವರನ್ನು ಪಡೆದ ನನ್ನ ರಾಜ್ಯ ಧನ್ಯವಾಗಿದೆ. ಇನ್ನು ಯಾರಾದರೂ ನಿಮ್ಮ ಮಗನ ಸಾವಿಗೆ ಕಾರಣವೆನ್ನುವಂತೆ ಅಧರ್ಮವನ್ನು ಮಾಡಿದರೇನು? ತಿಳಿದಿದ್ದರೆ ಅದನ್ನು ಹೇಳಿ, ಅವರನ್ನು ಅಳಿಸುತ್ತೇನೆ. ಕಾರಣದ ನಾಶದಿಂದ ಕಾರಣವೂ ನಾಶವಾಗುತ್ತದೆ' ಎಂದು ದೃಢವಾಣಿಯಿಂದ 'ನನ್ನ ರಾಜ್ಯದಲ್ಲಿ ಅಧರ್ಮ ಇರಲಾಗದು' ಎನ್ನುತ್ತಾನೆ.

ಶ್ರೀರಾಮನ ಧರ್ಮಕೋಪಕ್ಕೆ ಬ್ರಾಹ್ಮಣನು ಹೆದರುತ್ತಾನೆ. ರೆಪ್ಪೆ ಬಡೆಯದೆ ನೋಡುತ್ತಿರುವ ಅವನಿಗೆ ರಾಮನು 'ಬೆದರಿಕೆಯನ್ನು ಬಿಡಿ. ಸತ್ಯವನ್ನು ಹೇಳಿ' ಎನ್ನುತ್ತಾನೆ. ಬ್ರಾಹ್ಮಣನು 'ಕ್ಷಮಿಸಿ, ಮಹಾಮರುಷ, ನನಗೆ ನಾಲಿಗೆ ತೊದಲುತ್ತಿದೆ' ಎನ್ನುತ್ತಾನೆ. "ನಿಜ ಹೇಳುವುದಕ್ಕೆ ಯಾಕೆ ತೊದಲುತ್ತಿದೆ?" ಎಂದು ರಾಮನು ಕೇಳಿದಾಗ ಬ್ರಾಹ್ಮಣನು "ನಿನ್ನ ಇದಿರೇ ನಿನ್ನ ಹೆಸರನ್ನು ಹೇಳುವುದಕ್ಕೆ ಹೆದರುತ್ತೇನೆ" ಎನ್ನುತ್ತಾನೆ. ರಾಮನು ನಸುಬೆಚ್ಚಿದಂತಾಗಿ ತನಗೆ ತಾನೆ 'ಅಪರಾಧಗಳಿಗೆಲ್ಲ ನಾನೇ ಮೂಲವೋ ಏನು?, ಅಂದು ಅಗಸನು ಆಡಿದನು, ಇಂದು ಬ್ರಾಹ್ಮಣನು!" ಎಂದು ಗಟ್ಟಿಯಾಗಿ ಬ್ರಾಹ್ಮಣನಿಗೆ 'ದ್ವಿಜೋತ್ತಮ, ಸತ್ಯವು ಸರ್ವಪೂಜ್ಯ, ಸತ್ಯಕ್ಕೆ ಹೆದರುವುದು ಸರಿಯೇ? ಈ ದಶರಥನ ಮಗನು ಸತ್ಯವನ್ನು ಕೇಳಲಿಕ್ಕೆ ಯಾವಾಗಲೂ ಹೆದರಲಿಲ್ಲ. ಭೂಮಿಯ ಹಿರಿಯನೆ. ಸತ್ಯವು ಯಾರಿಗೂ ಕ್ಷೇಮವೇ.

ಹೇಳುವವರಿಗೂ ಕೇಳುವವರಿಗೂ ಕ್ಷೇಮ, ತಡಮಾಡದೆ ಹೇಳಿರಿ. "ನನ್ನ ಅಪರಾಧವೇನು? ನನ್ನಿಂದ ಆದ ಅಧರ್ಮವೇನು? ಜನ್ಮದಿಂದ ಮಾತ್ರವಲ್ಲದೆ ಕರ್ಮದಿಂದಲೂ ನೀವು ಗುರುಗಳಾಗಿರುವಿರಿ ಹೇಳಿ, ತಡಮಾಡದೆ ಹೇಳಿರಿ' ಎಂದನು.

ಬ್ರಾಹ್ಮಣನು 'ಶಿಷ್ಟಪರಿತಾಣಮೂರ್ತಿ, ಕೇಳು: "ಇಂದು ಬೆಳಗಿನ ಹೊತ್ತು ದೇವಾರ್ಚನೆಗೆ ಹೂವು ಕೀಳಲೆಂದು ನಾನು ಮಗುವಿನೊಂದಿಗೆ ಒಂದು ಹೆಸರಿನ ಬನವನ್ನು ಸಾರಿದೆನು' ಎಂದನು. ರಾಮನು 'ಆ ಬನಕ್ಕೆ ಹೆಸರಿದೆಯೇ ?' ಅದು ಇರುವುದು ಯಾವ ಕಡೆಗೆ? ಎಂದು ಕೇಳಿದನು. ಬ್ರಾಹ್ಮಣನು 'ಪಾಪಕರ' ಎಂದು ಆ ಹೆಸರನ್ನು ಹೇಳಲಿಲ್ಲ. ಅದು ಮೃತ್ಯುವಿನ ದಿಕ್ಕಿನಲ್ಲಿದೆ' ಎಂದಾಗ 'ಹೆಸರಿನಲ್ಲಿ ಏನು ಪಾಪ ಹೇಳಿ?' ಎಂದನು. ಬ್ರಾಹ್ಮಣನು 'ಆ ಕಾಡನ್ನು ಶಂಭೂಕಾಶ್ರಮ ಎಂದು ಕರೆಯುತ್ತಾರೆ' ಎಂದನು. ರಾಮನು ಚಿಂತಾಮಗ್ನನಾಗಿ 'ಓಹೋ, ಈಗ ನನಗೆ ಅರ್ಥವಾಗುತ್ತದೆ. ಮುಂದೆ ?' ಎಂದು ಪ್ರಶ್ನಿಸಿದನು. ಬ್ರಾಹ್ಮಣನು 'ಮುಂದೇನು, ಮಹಾಪ್ರಭೂ? ನಾವು ಇಬ್ಬರೂ ಆ ತಪಸ್ಸು ಮಾಡುತ್ತಿದ್ದ ಶೂದ್ರನನ್ನು ಶಂಭೂಕ ಎಂಬ ಹೆಸರಿನ ಆತನನ್ನು ಋಷಿವೇಷದ ಆ ಪಾಷಂಡಿಯನ್ನು ಕಂಡೆವು' ಎಂದನು.

ಶ್ರೀರಾಮನ ಹುಬ್ಬು ಗಂಟಿಕ್ಕುತ್ತವೆ, ಕೋಪಗೊಳ್ಳುತ್ತಾನೆ, ಆಲೋಚಿಸುತ್ತಾ ನಿಲ್ಲುತ್ತಾನೆ. ರಾಮನು ಬ್ರಾಹ್ಮಣನ ಕಡೆಗೆ ತಿರುಗಿ 'ನಮಸ್ಕಾರ ಮಾಡಿದರೇನು?' ಎಂದು ಕೇಳುತ್ತಾನೆ. ಬ್ರಾಹ್ಮಣನು ಕಿವಿಮುಚ್ಚಿ 'ಶಿವ ಶಿವ ಶಿವ ಅಂತಹ ಘೋರವನ್ನು ನಾವು ಎಂದಿಗೂ ಮಾಡಿದವರಲ್ಲ, ಅರಿಯದ ಮಗನು ಕೈಮುಗಿಯುತ್ತಿದ್ದ: ಬಿಡು, ಶೂದ್ರನಿಗೆ ನಮಸ್ಕಾರ ಮಾಡಲಾಗದು !' ಎಂದು ನಾನು ಬುದ್ಧಿಯನ್ನು ಹೇಳಿ ತಡೆದನು ಎನ್ನುತ್ತಾನೆ.

ಶ್ರೀರಾಮನು ಬ್ರಾಹ್ಮಣ ಮಾತಿಗೆ ಪ್ರತಿಯಾಗಿ ವ್ಯಂಗ್ಯವಾಗಿ 'ಹೇಗಾದರೂ ತಾವು ವೇದ ಮೂರ್ತಿಗಳಲ್ಲವೆ?' ಎಂದನು. ಬ್ರಾಹ್ಮಣನು 'ನಿನ್ನ ರಾಜ್ಯದಲ್ಲಿ ಇದ್ದು ಅಷ್ಟನ್ನಾದರೂ ಅಧರ್ಮವನ್ನು ತಡೆಯದಿದ್ದರೆ ನಮಗೆ ನರಕವಾಗುವುದಿಲ್ಲವೆ?' ಎಂದನು. ಶ್ರೀರಾಮನು 'ಓಹೊ ನಿಜ ಸ್ವರ್ಗವಾಗುವುದನ್ನೆ ಮಾಡಿದಿರಿ. ಆ ಪುಣ್ಯದ ಒಂದು ಮಹಿಮೆಗೆ ನಿಮ್ಮ ಮಗನು ಸ್ವರ್ಗಸ್ಥನಾದ ಎನ್ನುತ್ತೀರಾ?' ಎಂದನು. ಬ್ರಾಹ್ಮಣನು 'ಅಲ್ಲ ಅಲ್ಲ, ರಾಮ ಚಂದ್ರ, ಶೂದ್ರನು ತಪಸ್ಸನ್ನು ಮಾಡುತ್ತಾನೆ ಎಂಬ ಒಂದು ಅಧರ್ಮಕ್ಕೆ, ವರ್ಣಾಶ್ರಮ ಧರ್ಮದ ಉಲ್ಲಂಘನೆಯ ಪಾಪಕ್ಕೆ, ನಿನ್ನ ಬಾಲಪ್ರಜೆ ಒಬ್ಬನು ಬಲಿಯಾದನು. ಮುಂದೆ ಯಾವ ಮಹತ್ಕಾರ್ಯವನ್ನು ಮಾಡಲಿದ್ದನೊ, ಯಾವ ಶಾಸ್ತ್ರವನ್ನು ಹೇಳಲಿದ್ದನೊ, ಯಾವ ಕಾವ್ಯವನ್ನು ಕಟ್ಟಲಿದ್ದನೋ, ಯಾವ ತಪದಿಂದ ಯಾವ ಸಿದ್ಧಿಯನ್ನು ಪಡೆಯಲಿದ್ದನೊ, ಅಂತು ನನ್ನ ಮಗ ಶೂದ್ರನ ತಪೋದುಷ್ಕೃತ್ಯಕ್ಕೆ ಆಹುತಿಯಾದನು. "ಹಾವು ಕಚ್ಚಿ ತೀರಿಕೊಂಡನು!" ಎಂದು ಅಳುತ್ತಾನೆ.

ಶ್ರೀರಾಮನು ಕನಿಕರದಿಂದಲೂ, ಕೋಪದಿಂದಲೂ ತನಗೆ ತಾನೇ ಹೇಳಿಕೊಳ್ಳುತ್ತಾನೆ. 'ಈ ಬ್ರಾಹ್ಮಣನಿಗೆ, ಈ ಶಾಸ್ತ್ರ ಅರಿತ ಮೂರ್ಖನಿಗೆ ಹೇಗೆ ಬುದ್ಧಿ ಕಲಿಸಲಿ? ಎನ್ನುತ್ತಾ "ಶಂಭೂಕನು ಮಹಾಯೋಗಿ, ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮ ಈತನ ಮುದ್ದುಕಂದನಿಗೆ ನನ್ನ ರಾಜ್ಯದಲ್ಲಿಯ ಅಕಾಲ ಮೃತ್ಯುವನ್ನು ತಂದಿತು, ತನ್ನ ತಪ್ಪನ್ನೆ ತಿಳಿಯಲಾರದ ಈತನು ಮರೆಯಿಂದ ನನ್ನನ್ನು: ಬಹಿರಂಗವಾಗಿ ಶಂಭೂಕ ಯೋಗಿಯನ್ನು ನಿಂದಿಸುತ್ತಿದ್ದಾನೆ." ಹೀಗೆ ಹೇಳಿ ಆಲೋಚಿಸಿ, ನಿರ್ಣಯಿಸಿ, ಮತ್ತೆ 'ಬ್ರಾಹ್ಮಣರೇ ತೋರು, ಆ ಶಂಭೂಕ ವನವನ್ನು, ಆ ಜಾಗಕ್ಕೆ ಹೋಗೋಣ, ಅಧರ್ಮವನ್ನು ತಡೆಯೋಣ. ರಾಮರಾಜ್ಯದಲ್ಲಿ ಅಧರ್ಮವೇ ಮೃತ್ಯು. ಅಧರ್ಮ ಸಂಹಾರವೆ ಮೃತ್ಯುವಿಜಯ, 'ಧರ್ಮವು ಬದುಕಿದರೆ ನಿನ್ನ ಮಗನೂ ಬದುಕುತ್ತಾನೆ' ಎಂದನು.

**ದೃಶ್ಯ : ಮೂರು ಶಂಭೂಕಾಶ್ರಮದಲ್ಲಿ ನಡೆದ ಘಟನೆ:**

ಬೆಳದಿಂಗಳಲ್ಲಿ ಎಲ್ಲೆಲ್ಲಿಯೂ ನಿಶ್ಯಬ್ದ "ಹೂವಿನ ಪೊದೆ ಬೆಳೆದ ಒಂದು ಹುತ್ತದ ಕಡೆ ಬ್ರಾಹ್ಮಣನ ಕುಮಾರನು ಸತ್ತು ಬಿದ್ದಿದ್ದಾನೆ. ಕಳೇಬರದ ಸಮೀಪದಲ್ಲಿ ಛಾಯಾರೂಪಿ ಮೃತ್ಯು ನಿಂತಿರುವುದು ಕಂಡುಬರುತ್ತದೆ. ಅನತಿ ದೂರದಲ್ಲಿಯೇ ಸಮಾಧಿಮಗ್ನನಾಗಿರುವ ಶಂಭೂಕ ಮಹರ್ಷಿಯ ಧ್ಯಾನ ಸ್ತಿಮಿತವಾದ ಆಕೃತಿಯೂ ಕಂಡುಬರುತ್ತದೆ. ಆತನ ಸುತ್ತಲೂ ಹುತ್ತ ಬೆಳೆದಿದೆ. ಗಡ್ಡ ಬೆಳೆದು ಮುಖ ಆವರಿಸಿಕೊಂಡಿದೆ. ಸಿಕ್ಕು ಗಟ್ಟಿದ ಕೂದಲು ಬಳ್ಳಿಗಳಲ್ಲಿ ಹೆಣೆದುಕೊಂಡಿವೆ. ಅರ್ಧಭಾಗದ ಮೈಗೆ ಹುತ್ತವೂ ಬೆಳೆದಿದೆ." ಆ ಭವ್ಯ ದೃಶ್ಯವು ಜ್ಞಾನಿ ಆಗುವಷ್ಟರಮಟ್ಟಿಗೆ ಪ್ರಕೃತಿಲೀನವಾಗಿದೆ ಆ ಋಷಿಯ ಆಕೃತಿ. ಇದ್ದಕ್ಕಿದ್ದ ಹಾಗೆ ವನದಲ್ಲಿ ಭಾವಸಂಚಾರವಾದಂತಾಗಿ, ಗಾಳಿ ಬೀಸಿ ಹೂಬಳ್ಳಿ ಪೊದೆ

ಎಲ್ಲವೂ ತಲೆ ಅಲುಗಾಡುತ್ತದೆ. ಮೃತ್ಯುವೂ ಭಕ್ತಿಯಿಂದ ಬಾಗಿ ಕೈಮುಗಿಯುತ್ತದೆ. ಬ್ರಾಹ್ಮಣನೊಂದಿಗೆ ಶ್ರೀರಾಮನು ಪ್ರವೇಶಿಸುತ್ತಾನೆ. ಆತನ ಮುಖ ಭಾವದೀಪ್ತವಾಗಿದೆ. ತನ್ನ ಆನಂದಕ್ಕೆ ತಾನೆ ಮಾತನಾಡಿಕೊಳ್ಳುವಂತಿದೆ. ಮಹಾತಪಸ್ವಿಯಾದ ಶಂಬೂಕ ಯೋಗಿಯ ದಿವ್ಯ ತೇಜಸ್ಸನ್ನು ಕಾಣುತ್ತಾನೆ. ಶ್ರೀರಾಮನು ಅಲ್ಲಿ ಎಂತಹ ಶಾಂತಿ ನೆಲಸಿದೆ ಎಂಬುದನ್ನು ಅರಿತು ಸಂತೋಷಪಡುತ್ತಾನೆ. 'ತಪಸ್ಸಿನ ಮಹಿಮೆಗೆ ಎಣೆಯಿದೆಯೇ?' ಎಂದು ಹೇಳುತ್ತಾ ರಸಾನುಭವ ಮಾಡುವವನಂತೆ ಧ್ಯಾನಭಂಗಿಯಿಂದ ನಿಲ್ಲುತ್ತಾನೆ.

ಇದನ್ನು ನೋಡಿ ಬ್ರಾಹ್ಮಣನು ತನಗೆ ತಾನೇ ಹೇಳಿಕೊಳ್ಳುತ್ತಾನೆ. ದೃಶ್ಯ ನೋಡಲು ಆಶ್ಚರ್ಯವಾಗುತ್ತದೆ. ಸೋಜಿಗವಾಗಿದೆ! ಅದೇನು ಪ್ರೇಮವೋ? ಆದೇನು ಮೋಹವೋ? ಸೀತೆಯನ್ನು ಕಾಡಿಗೆ ಬಿಟ್ಟ ಈತನಿಗೆ ಅರಣ್ಯವೇ ಸೀತೆಯಾಗಿದ್ದಾಳೆ' ಬ್ರಾಹ್ಮಣನು ರಾಮನಿಗೆ ತನ್ನ ಮಗನು ಸತ್ತು ಬಿದ್ದಿದ್ದ ಜಾಗವನ್ನು ತೋರಿಸಿ. 'ನನ್ನ ಈ ಕಣ್ಮಣಿಯನ್ನು ರಕ್ಷಿಸಿ, ರಕ್ಷಿಸಿ ಎಂದು ಕುಸಿಯುತ್ತಾನೆ.' ರಾಮನು ಪ್ರಯತ್ನಿಸಿದರೆ ಸಾಧ್ಯವಾಗದೆ ಅಶಾಂತನಾಗಿ ತನಗೆ ತಾನೆ ಆಡಿಕೊಳ್ಳುತ್ತಾನೆ. ಯಾವಾಗಲೂ ಸ್ಥಿತಪ್ರಜ್ಞನಿಗೂ 'ಈ ಪುತ್ರಶೋಕದ ದೃಶ್ಯವು ಅಧೈರ್ಯವನ್ನುಂಟು ಮಾಡುತ್ತದೆ. ನನ್ನ ಅಗಲಿಕೆಗೆ ಅಂದು ಎದೆಬಿರಿಯುವಂತೆ ಅತ್ತ ನನ್ನ ತಂದೆಯನ್ನು ಈ ಅಶಾಂತನಾಗಿ ತನಗೆ ತಾನೆ ಆಡಿಕೊಳ್ಳುತ್ತಾನೆ. ಏನು ಮಾಯೆ? ಅಮೃತ ಸಾಕ್ಷಾತ್ಕಾರವಾದವರಿಗೂ ಮೃತ್ಯು ಸಂಕಟಕರ, ನಾಟಕದ ನಿಜವನ್ನು ಅರಿಯುವುದು ನೇಪಥ್ಯವನ್ನು ಹೊಕ್ಕ ಮೇಲಲ್ಲವೆ?' ಎಂದುಕೊಂಡು ಬ್ರಾಹ್ಮಣನ ಬಳಿಗೆ ಹೋಗಿ ಗಟ್ಟಿಯಾಗಿ ಹಾಗೆ ರೋದಿಸಬೇಡಿ, ನಡೆದ ಒಂದು ಅಧರ್ಮವನ್ನು ಪರಿಹರಿಸಿದ ಕೂಡಲೇ ನಿನ್ನ ಈ ಚಿರಂಜೀವಿ ಬದುಕಿ ಉಳಿಯುತ್ತಾನೆ.' ಎಂದನು. ಬ್ರಾಹ್ಮಣನು ಉನ್ಮತ್ತ ಹರ್ಷದಿಂದ ಮೇಲೆದ್ದು 'ಅಮೃತನಕ್ಕುಮ್ ನಿನ್ನ ಈ ಚಿರಂಜೀವಿ! ಸತ್ಯ ವಾಕ್ ನೀನ್, ಇಕ್ಷಾಕುಕುಲೇಂದ್ರ ಇನ್ನು ನನ್ನ 'ಕಂದನು ಚರಂಜೀವಿ ! ಆ ಅಧರ್ಮಚಾರಿಯನ್ನು ಶೀಘ್ರವಾಗಿ ಶಿಕ್ಷಿಸು' ಕೊಲ್ಲು ಅವನನ್ನು ಎಂದನು.

ಶ್ರೀರಾಮನು ಕೈಮುಗಿದು ನಿಂತಿದ್ದ ಮೃತ್ಯುದೇವತೆಯನ್ನು ಪ್ರಸನ್ನ ದೃಷ್ಟಿಯಿಂದ ನೋಡಿ ಇದೇನು ನೀನು, ಈ ತಪೋವನದಲ್ಲಿ ?' ಎಂದು ಕೇಳುತ್ತಾ ಮುಗುಳುನಗೆ ನಕ್ಕು ಉಪವಾಸವನ್ನು ಆಚರಿಸುತ್ತಿರುವೆಯಾ ? ಎನ್ನುತ್ತಾನೆ. ಮೃತ್ಯು ಹಸನ್ಮುಖಿಯಾಗಿ 'ತಪಸ್ಸು ಮಾಡುತ್ತಿದ್ದೇನೆ' ಎನ್ನುತ್ತಾನೆ. ಯಾರ ಅಮಂಗಳದ ಅದಾವ ಸಿದ್ದಿಗೋ?' ಎಂದು ರಾಮನು ವಿನೋದದಿಂದ ಕೇಳುತ್ತಾನೆ. ಮೃತ್ತು 'ದೈತ್ಯವೈರಿಯ ಧರ್ಮ ಸಿದ್ಧಿಗೆ ಎಂದು ಹೇಳಿದಾಗ ರಾಮನು 'ನಿನಗೆ ಅನೇಕ ವಂದನೆಗಳು' ಎನ್ನುತ್ತಾನೆ. ಆತ 'ನಾನು ಧನ್ಯನಾದೆ' ಎನ್ನುತ್ತಾನೆ. ಬ್ರಾಹ್ಮಣನಿಗೆ ಆಶ್ಚರ್ಯವಾಗುತ್ತದೆ. 'ಈ ಆಕಾಶವರ್ಣನಿಗೆ ಯಾರೊಡನೆ ಸಂವಾದ?' ಎಂದುಕೊಳ್ಳುತ್ತಾನೆ. ರಾಮನು 'ದ್ವಿಜೋತ್ತಮ, ನೀನು ಹೇಳಿದ ಆ ಅನಧಿಕಾರಿ, ಆ ಶೂದ್ರನು, ತಪವಿರುವ ತಾಣವನ್ನು ತೋರಿಸುವುದೇ ತಡ' ಎಂದಾಗ 'ಅದೇ ನೋಡು ಆ ವಲ್ಮೀಕದ(ಹುತ್ತ) ಜಾಗ' ಎನ್ನುತ್ತಾನೆ.

ರಾಮನು ತನಗೆ ತಾನೇ ಹೇಳಿಕೊಳ್ಳುತ್ತಾನೆ. "ಏನು ನಾಲಿಗೆ ಈ ಬ್ರಾಹ್ಮಣನದು ? ಮಾತು ಮಾತಿಗೆ ನನ್ನ ಮರ್ಮವನ್ನು ಚುಚ್ಚುತ್ತಾನೆ. ವಲ್ಮೀಕ ಎನ್ನುವ ಆ ಪದವನ್ನು ಆಲಿಸಿದ ನನಗೆ ಸೀತೆಯನ್ನು ಸಲಹುತ್ತಿರುವ ಆ ಮಹಾಕವೀಶ್ವರ “ವಾಲ್ಮಿಕಿಯ” ನೆನಪು ಹೊಳೆದು ಏಕೋ ಮನಸ್ಸಿಗೆ ದಿವ್ಯದುಃಖ ಉಕ್ಕುತ್ತಿದೆ. ಆ ಕವಿ ಋಷಿಯು ಈ ಶಂಭೂಕನ ಹಾಗೆ ಶೂದ್ರನಲ್ಲವೆ? ವ್ಯಾಧವೃತ್ತಿಯಲ್ಲಿ ಇದ್ದವನು ಉಗ್ರ ತಪಸ್ಸಿನಿಂದ ಮಹರ್ಷಿತ್ವಕ್ಕೆ ಏರಿದವನಲ್ಲವೆ? ತಪೋಮಹಿಮೆಗೆ ಎಣೆಯುಂಟೆ?" ಹೀಗೆ ಹೇಳಿಕೊಂಡು ಬ್ರಾಹ್ಮಣನು ಕೈದೋರಿದ ಕಡೆಗೆ ನೋಡುತ್ತಾ “ಬಿಲ್ಲನ್ನು ಸರಿ ಮಾಡುವ ನೆವದಿಂದಲೆಂಬಂತೆ ಶಂಬೂಕ ಮಹರ್ಷಿಗೆ ಕೈಜೋಡಿಸುತ್ತಾನೆ”. ಬ್ರಾಹ್ಮಣನು ಬೆಚ್ಚಿ ತನ್ನಲ್ಲಿಯೆ ಮಾತನಾಡಿಕೊಳ್ಳುತ್ತಾನೆ. ಇದೇನು? ತಪಸ್ಸು ಮಾಡುವ ಪಾಪಂಡಿಗೆ ಕೈ ಮುಗಿಯುವನೋ? ಅಥವಾ ಬಿಲ್ಲಿಗೆ ಹೆದೆಯನ್ನು ಬಿಗಿಯುವ ವಿದ್ಯೆಯ ನೀತಿಯೋ ? ಈ ಪಾರ್ಥಿವೇಂದ್ರನ ವಿಚಿತ್ರವಾದ ಆಕೃತಿಯನ್ನು ತಿಳಿಯದಾದೆನು' ಎಂದು ಹೇಳಿಕೊಳ್ಳುತ್ತಾ ಆಶ್ಚರ್ಯದ ನೋಟದಿಂದ ನಿಲ್ಲುತ್ತಾನೆ.

ರಾಮನು ಬ್ರಾಹ್ಮಣನ ಕಡೆ ತಿರುಗಿ 'ಭೂಸುರೋತ್ತಮ, ಕ್ಷತ್ರಿಯನ ಒಂದು ಸಂದೇಹವನ್ನು ನಿವಾರಿಸಿ ಕೃಪೆ ಮಾಡಬೇಕು' ಎಂದಾಗ, ಬ್ರಾಹ್ಮಣನು ವಿನಯದಿಂದ 'ನನ್ನ ಅಲ್ಪ ಬುದ್ಧಿಗೆ ತೋರಿದುದನ್ನು ಹೇಳುತ್ತೇನೆ' ಎಂದನು.

ರಾಮನು ವ್ಯಂಗ್ಯದಿಂದಾದರೂ ಗಂಭೀರವಾಗಿ 'ಪೂಜ್ಯರು ಉದಾತ್ತ ಬುದ್ಧಿಯಿಂದ ಹೇಳಬೇಕು' ಎಂದನು. ಬ್ರಾಹ್ಮಣನು 'ಯಥಾ ಸಾಮರ್ಥ್ಯದಿಂದ ಹೇಳುತ್ತೇನೆ' ಎಂದನು.

ರಾಮನು 'ತಪಸ್ಸು ಪೂಜ್ಯಕರ್ಮವಲ್ಲವೇ, ದ್ವಿಜೇಂದ್ರ? ಎಂದು ಕೇಳಿದಾಗ 'ತಪಕ್ಕೆ ಸಮನಾದುದು ಉಂಟೆ, ರಾಘವೇಂದ್ರ?' ಎಂದನು. 'ತಪಸ್ಸನ್ನು ಮಾಡತಕ್ಕವನು ಪೂಜ್ಯನಲ್ಲವೆ. ಬ್ರಾಹ್ಮಣರೇ?' ಎಂದು ರಾಮನು ಹೇಳಿದಾಗ ಬ್ರಾಹ್ಮಣನು ಆ ಮಾತನ್ನು ಒಪ್ಪಿಕೊಂಡನು. ಮತ್ತೆ ರಾಮನು ಪೂಜ್ಯರ ಆಚರಣೆ ಪಾಪಕರವಲ್ಲವೆ, ಸತ್ವ ಶೀಲ?' ಎಂದಾಗ ಬ್ರಾಹ್ಮಣನು 'ನಿಸ್ಸಂಶಯವಾಗಿ, ವಾಲಿಸಂಹಾರಿ" ಎಂದನು. ಅದಕ್ಕೆ ರಾಮನು 'ಹಾಗೆಯೇ ಸತ್ವ ಶೀಲ?' ಎಂದಾಗ ಬ್ರಾಹ್ಮಣನು 'ನಿಸ್ಸಂಶಯವಾಗಿ, ವಾಲಿಸಂಹಾರ ಎಂದನು. ಈ ತಪಸ್ವಿಯನ್ನು ಕೊಲ್ಲುವುದು ಪಾಪವಾಗದೆ?' ಎಂದು ಕೇಳಿದನು. ಅದಕ್ಕೆ ಬ್ರಾಹ್ಮಣನು 'ವಸಿಷ್ಠ ಶಿಷ್ಯ ಶ್ರುತಿ ವಾಕ್ಯವು ತರ್ಕಕ್ಕೆ ಮಿಗಿಲಾದದ್ದು ಅಲ್ಲವೇ ? "ಶೂದ್ರನು ತಪಕ್ಕೆ ಅನಧಿಕಾರಿ ಎಂಬುದು ಶಾಸ್ತ್ರ ಪ್ರಸಿದ್ಧವಾಗಿದೆ." "ಕೃತಯುಗದಲ್ಲಿ ತಪಸ್ಸಿಗೆ ಅರ್ಹರು ಬ್ರಾಹ್ಮಣರು ಮಾತ್ರ ತ್ರೇತಾಯುಗದಲ್ಲಿ ಕ್ಷತ್ರಿಯರೂ ಅರ್ಹರು. ದ್ವಾಪರಯುಗದಲ್ಲಿ ವೈಶ್ಯರೂ ತಪಸ್ಸು ಮಾಡುತ್ತಾರೆ. ಕಲಿಕಾಲ ಬಂದಾಗ ಶೂದ್ರನೂ ತಪಸ್ವಿ." ಆ ಕಾರಣದಿಂದ ಕೃತಯುಗದಲ್ಲಿ ನಾಲ್ಕೂ ಕಾಲಿನಲ್ಲಿ ನಿಂತ ಧರ್ಮವು ತ್ರೇತಾಯುಗದಲ್ಲಿ ಮೂಗಾಲಿಯಾಗುತ್ತದೆ (ಮೂರು ಕಾಲ), ದ್ವಾಪರದಲ್ಲಿ ದ್ವಿಪಾದಿ, ಕಲಿಯುಗದಲ್ಲಿ ಒಂಟಿಗಾಲಿನಲ್ಲಿ – ಕುಂಟಿ ತತ್ತರಿಸಿ ಸತ್ತು ವಿಲಯದ ಕಡೆಗೆ ಓಡುತ್ತದೆ. ಕೇಳು, ವರ್ಣಾಶ್ರಮ ಧರ್ಮಪಾಲಕ "ಹಾಲು ಪೂಜ್ಯವಾದರೂ, ಆ ನಾಯಹಾಲು ವ್ಯರ್ಥ. ಶೂದ್ರನ ತಪಸ್ಸು ನಾಯಿಯ ಹಾಲಿಗೆ ಸಮಾನ"ಎಂದನು.

ರಾಮನು ಕೋಪವನ್ನು ತೋರಗೊಡದೆ ವ್ಯಂಗ್ಯದಿಂದ 'ನೀವು ಕಲಿತ ವಿದ್ಯೆ ಸಾರ್ಥಕ ! ಆಚಾರ್ಯ' ಎಂದು ಬಳಿಕ 'ನಿಮಗೆ ಬಾಣ ಪ್ರಯೋಗವು ಸಮ್ಮತವಲ್ಲವೆ?' ಎನ್ನುತ್ತಾನೆ. ಬ್ರಾಹ್ಮಣನು 'ಹೌದು, ಧನಸ್ಸನ್ನು ಧರಿಸಿದ 'ರಾಮನೇ, ಶಿಕ್ಷೆಗೆ ಅರ್ಹ ಈ ಶೂದ್ರತಪಸ್ವಿ' ಎಂದನು. ರಾಮನು 'ಶೂದ್ರನಾದರೂ ತಪಸ್ಸು ಶಕ್ತಿದಾಯಕ, ಎಂದಾಗ ಬ್ರಾಹ್ಮಣನು 'ಯಾವ ದಿವ್ಯಾಸ್ತ್ರದಿಂದ ದೈತ್ಯೇಂದ್ರ, ರಾವಣನ ದಶಶಿರಗಳು ಉರುಳಿದವೊ ಅದನ್ನೆ ತೊಡು, ಅದರಿಂದ, ಪಾಪ ಕರ್ಮದಲ್ಲಿ ಈತನು ಆತನಿಗೆ ಕೀಳಲ್ಲ' ಎಂದನು. ರಾಮನು 'ಬ್ರಹ್ಮಾಸ್ತ್ರವು ಅತಿ ಭಯಂಕರವಾದದ್ದು, ದ್ವಿಜನ್ಮ, ಅದು ಹೇಗಾದರೂ ತನ್ನ ಶತ್ರುವನ್ನು ತಿಳಿಯದೆ ಬಿಡದು' ಎಂದನು. ಬ್ರಾಹ್ಮಣನು 'ಈ ಪಾಷಂಡಿಗೆ ಅದು ಸರಿಯಾದುದು ತೊಡು ಕೋದಂಡಪಾಣಿ' ಎಂದನು.

ಶ್ರೀರಾಮನು ಬತ್ತಳಿಕೆಗೆ ಕೈಯಿಕ್ಕುತ್ತಾನೆ. ಭೂಮಿ ನಡುಗುತ್ತದೆ. ಗಗನ ಗುಡುಗುತ್ತದೆ. ಬ್ರಾಹ್ಮಣನು ಹೆದರಿ, ರಾಮನ ಮರೆಗೆ ಹೋಗುತ್ತಾನೆ. ಮೃತ್ಯು ಬೆಪ್ಪಾಗಿ ಕೂಗುತ್ತದೆ.

ಆಗ ಮೃತ್ಯುವು 'ಋತಪ್ರಧೂ ! ತಾಳು ತಾಳು' ಎಂದಿತು. ರಾಮನು ಮೃತ್ಯುವನ್ನು ಲಕ್ಷಿಸಿ ನಿನಗೆ ಇದೇನು ತಲ್ಲಣ?' ಎಂದು ಕೇಳಿದನು. ಮೃತ್ಯುವು 'ಇದೇನು ಆಟವೋ ದಿಟವೋ ನನಗೆ ಅರಿವು ತೋರು ! ನನಗೆ ನಡೆವ ದಾರಿ ಯಾವುದು?' ಎಂದು ಕೇಳಿತು. ರಾಮನು ಹುಬ್ಬು ಗಂಟಿಕ್ಕಿ ಮೃತ್ಯು ಯಾವಾಗಲೂ ಎಲ್ಲರಿಗೂ ಒಂದೇ ರೀತಿಯ ಕರ್ತವ್ಯ. ಈ ಮಹಾಸ್ತ್ರ ಮಾರ್ಗದರ್ಶಿ" ಎಂದನು. ಮೃತ್ಯುವು' 'ಆಜ್ಞೆ!" ಎಂದು ತಲೆಬಾಗಿ ಸಿದ್ಧವಾಗುತ್ತದೆ. ಶ್ರೀರಾಮನು ಬ್ರಹ್ಮಾಸ್ತ್ರವನ್ನು ತೊಟ್ಟು "ಅರಸಿ ಕೊಲ್ ಅರಗುಲಿಯನ್!" (ಅಧರ್ಮಿಯನನ್ನು ಹುಡುಕಿ ಶಿಕ್ಷಿಸು) ಎಂದು ಘೋಷಿಸಿ, ಸೆಳೆದು ಬಿಡುತ್ತಾನೆ. ಮಿಂಚು ತಳಿಸುತ್ತದೆ, ಸಿಡಿಲೆರಗುತ್ತದೆ. ಬಿರುಗಾಳಿ ಒಂದೇ ಸಮನೆ ಬೀಸುತ್ತದೆ. ಧೂಳು ಕವಿಯುತ್ತದೆ. ಅರಣ್ಯ ಸಮಸ್ತವೂ ತಪಿಸಿ ಚೀತ್ಕರಿಸುತ್ತದೆ. ಮೃತ್ಯುವಿನ ಕರಾಳಛಾಯೆ ರೌದ್ರರೋಷದಿಂದಲೂ ಶರವೇಗದಿಂದಲೂ ಅಸ್ತ್ರವನ್ನು ಹಿಂಬಾಲಿಸುತ್ತದೆ. ತಪಸ್ವಿಯ ಸಮೀಪಕ್ಕೆ ಬಂದ ಬ್ರಹ್ಮಾಸ್ತ್ರವು ತನ್ನ ಉಗ್ರತೆಯನ್ನು ಬಿಟ್ಟು ವಿನಯದಿಂದ ಶಂಬೂಕ ಋಷಿಯನ್ನು ಸುತ್ತುಹಾಕಿ ಅಡ್ಡ ಬೀಳುತ್ತದೆ. ಮೃತ್ಯುವೂ ಅದನ್ನೇ ಅನುಕರಿಸುತ್ತದೆ. ಬೆಬ್ಬಳಿಸಿ ನೋಡುತ್ತಿರುವ ಬ್ರಾಹ್ಮಣನಿಗೆ ಶ್ರೀರಾಮನು ಮುಗುಳುನಗೆಗೂಡಿ ಹೇಳುತ್ತಾನೆ.

ರಾಮನು ಇದೇನು ಆಚಾರ್ಯ? ಎಂದನು. ಬ್ರಾಹ್ಮಣನು ಹೇ ದಾಶರಥಿ, ಇದೆಲ್ಲ ಶೂದ್ರತಪಸ್ಸಿನ ತಮಃ ಪ್ರಭಾವವೇ ನಿಜ. ನೀನು ಹೊಡೆದ ಬ್ರಹ್ಮಾಸ್ತ್ರವೂ ನಿಷ್ಫಲವಾಯಿತೇ?' ಎನ್ನುತ್ತಾನೆ. ರಾಮನು 'ಬ್ರಹ್ಮಾಸ್ತ್ರ ನಿಷ್ಫಲವಾಗುವುದು ಇದೆಯೆ ? ಈಗಲೇ ಸಫಲವಾಗುತ್ತದೆ' ಎಂದಾಗ ಬ್ರಾಹ್ಮಣನು ಅಚ್ಚರಿಯಿಂದ ಹೇಗೆ ?' ಎನ್ನುತ್ತಾನೆ. ರಾಮನು

ಋಷಿವರ್ಯನಿಗೆ ಮರ್ಯಾದೆಯನ್ನು ಸಲ್ಲಿಸಿ, ಬಳಿಕ ಈ ಕಡೆಗೆ ಬರುತ್ತದೆ' ಎಂದನು.

ಬ್ರಾಹ್ಮಣನು 'ಮತ್ತೆ ಈ ಕಡೆಗೆ ಏಕೆ ಬರುತ್ತದೆ?' ಎಂದಾಗ ರಾಮನು 'ತನ್ನ ಹಗೆಯನ್ನು ಧ್ವಂಸ ಮಾಡುವುದಕ್ಕೆ' ಎನ್ನುತ್ತಾನೆ. ಬ್ರಾಹ್ಮಣನು 'ಯಾರನ್ನು?' ಎಂದು ಕೇಳಿದಾಗ ರಾಮನು 'ಅಧರ್ಮಿಯನ್ನು' ಎನ್ನುತ್ತಾನೆ. ಮತ್ತೆ ಬ್ರಾಹ್ಮಣನು 'ಆ ಶೂದ್ರನನ್ನೆ ?' ಎಂದಾಗ ರಾಮನು 'ಅಲ್ಲ ಅಲ್ಲ. ಬ್ರಾಹ್ಮಣವರೇಣ್ಯನನ್ನು' ಎನ್ನುತ್ತಾನೆ. ಬ್ರಾಹ್ಮಣನು 'ಬ್ರಾಹ್ಮಣವರೇಣ್ಯನೇ?' ಎಂದು ಆಶ್ಚರ್ಯಪಟ್ಟಾಗ, ರಾಮನು ದರ್ಪಧ್ವನಿಯಿಂದ 'ಪೂಜ್ಯರನ್ನು ಅವಸ್ಥೆಗೈದ ಆತನನ್ನು, ಶಾಸ್ತ್ರ ಸಂಭ್ರಾಂತನನ್ನು, ದುರ್ವಿನೀತನನ್ನು' ಎನ್ನುತ್ತಾನೆ. ಬ್ರಾಹ್ಮಣನು ಶ್ರೀರಾಮನ ಇಂಗಿತಕ್ಕೆ ಹೆದರಿ 'ಆ?!' ಎನ್ನುತ್ತಾನೆ. ರಾಮನು ಬ್ರಾಹ್ಮಣನ ಕಡೆಗೆ ನೋಡದೆ 'ನಿನ್ನನ್ನು ದ್ವಿಜೋತ್ತಮ!' ಎನ್ನುತ್ತಾನೆ.

ಬ್ರಾಹ್ಮಣನು 'ರಕ್ಷಿಸು ಅನಾಥ ರಕ್ಷಕಾ, ದೀನಬಂಧೂ' ಎನ್ನುತ್ತ ಅವನ ಕಾಲನ್ನು ಹಿಡಿದುಕೊಳ್ಳಲು ಬಯಸುತ್ತಾನೆ. ಶ್ರೀರಾಮನು ಅವನ ಕಡೆಗೆ ನೋಡದೆ ನೀವು ಉದಾಸೀನತೆ ಮಾಡಿರುವುದು ನನ್ನನ್ನಲ್ಲ' ಎಂದು ಹೇಳುತ್ತಾನೆ. ಬ್ರಾಹ್ಮಣನು 'ನನಗೆ ಗತಿಯೇನು ? ದಾರಿತೋರಯ್ಯ, ಕ್ಷಮೆ ಮಾಡು ಜೀವಿತೇಶ್ವರ' ಎನ್ನುತ್ತಾನೆ. ಶ್ರೀರಾಮನು ಅವನ ಕಡೆಗೆ ನೋಡದೆ 'ಮಾರ್ಗದರ್ಶಿ ಆ ಮಹಾಸ್ತ್ರ' ಎನ್ನುತ್ತಾನೆ. ಬ್ರಾಹ್ಮಣನು 'ಹಾಗೆಯೇ ಮಾಡುತ್ತೇನೆ : ನಿನ್ನ ಆಜ್ಞೆ' ಎನ್ನುತ್ತಾನೆ.

ಶ್ರೀರಾಮನು ಅವನನ್ನು ನೋಡಿ ದಯೆಯಿಂದ ಇಲ್ಲಿಗೆ ಬರಿಯ ಆಜ್ಞಾಪಾಲನ ಸಾಲದು, ದ್ವಿಜನ್ಮ: ಬಂಧ ಪ್ರಜ್ಞೆಯ ಕಣ್ಣನ್ನು ತೆರೆಯಬೇಕು, ತಂದೆಯೂ ಬದುಕುತ್ತಾನೆ. 'ಕಂದನೂ ಬದುಕುತ್ತಾನೆ' ಎಂದನು. ಬ್ರಾಹ್ಮಣನು 'ಅಶಾಸ್ತ್ರ ಎಂದು ಹೆದರುತ್ತೇನೆ ಕತ್ರಿಯೋತ್ತಮ' ಎನ್ನುತ್ತಾನೆ. ರಾಮನು 'ಸನ್ಮತಿಯ ಸತ್ಕೃತಿಗೆ ಶಾಸ್ತ್ರದ ನೆರವು ಬೇಕೆ? ಆದರೂ ನಿನಗೋಸ್ಕರವಾಗಿ ಒಂದನ್ನು ಹೇಳುತ್ತೇನೆ, ಶ್ಲೋಕಪ್ರಮಾಣ ವನ್ನು ಕೇಳು, ಎನ್ನುತ್ತಾನೆ. ಆಗ ಆಕಾಶವಾಣಿ ಹೀಗೆ ಹೇಳುತ್ತದೆ: ಕೇವಲಂ ಶಾಸ್ತ್ರಮಾಶ್ರಿತ ನ ಕರ್ತವೋ ವಿನಿರ್ಣಯಃ ಯುಕ್ತಿಹೀನ ವಿಚಾರೇತು ಧರ್ಮಹಾನಿ ಪ್ರಚಾಯತೇ" ಬ್ರಾಹ್ಮಣನು ಎವೆಯಿಕ್ಕದೆ ಶ್ರೀರಾಮನನ್ನೇ ನೋಡುತ್ತಾ ಸ್ವಲ್ಪಹೊತ್ತು ನಿಂತು 'ಮಹಾಪೂಜ್ಯ, ನನಗೆ ಈಗ ಅರಿವಾಯಿತು, ಸಂಪ್ರದಾಯ ಬದ್ಧನಿಗೆ, ಜಾತಿ ಗರ್ವಾಂಧನಿಗೆ, ಯಾವ ಜಾತಿಯ ತರುವೊ? ಇಂಧನಕ್ಕೆ ಹೊರತುಂಟೆ? ಬೆಂಕಿಗೆ ಏನು ಭೇದವೆ? ದಳ್ಳುರಿಗೆ (ಕಟ್ಟಿಗೆಗೆ) ದಾಕ್ಷಿಣ್ಯವೆ? 'ಯಾರಾದರೇನು? ತಪೋಧನರು ಆರಾಧ್ಯರು. "ನಮಸ್ಕಾರವೇ ಪುಣ್ಯ : ತಿರಸ್ಕಾರವೇ ಪಾಪ" ಎಂದನು.

**ಉಪಸಂಹಾರ**

ಶ್ರೀರಾಮನು ಅವರಿಗೆ 'ಏನು ಮಾಡಿದರೂ ಪುಣ್ಯ ಎಂದು ಈಗ ತಿಳಿಯುತ್ತೀರಿ. ಎಷ್ಟು ಹಿಂಡಿದರೂ ಕಬ್ಬು ಮಧು ರಸವನ್ನು ನೀಡುವಂತೆ, ಕಡೆದರೂ ಕಡಲು ಅಮೃತವನ್ನು ಕೊಡುವಂತೆ, ನಿಮಗೆ ಒಳ್ಳೆಯದಾಗುತ್ತದೆ, ವಿಪ್ರದೇವ ಎಂದನು. ಮುಂದೆ ಮುಂದೆ ನಡೆದು ಬ್ರಾಹ್ಮಣನು ಶಂಬೂಕ ಮಹರ್ಷಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ವನವೆಲ್ಲ ಸಂಭ್ರಮವಾಗುತ್ತದೆ, ಹೂಮಳೆಗರೆಯುತ್ತದೆ. ದೇವ ದುಂದುಭಿ ಮೊಳಗುತ್ತದೆ. ಮೃತ್ಯುಛಾಯೆ ಬೇಗ ಬೇಗನೆ ಕಣ್ಮರೆಯಾಗುತ್ತದೆ. ಬ್ರಾಹ್ಮಣ ಕುಮಾರನು ಮಲಗಿದ್ದವನು ಏಳುವಂತೆ ಎದ್ದು ಕಣ್ಣು ಉಜ್ಜಿಕೊಂಡು, ಸುತ್ತಲೂ ನೋಡಿ, ತನ್ನ ತಂದೆಯನ್ನು ಕರೆಯುತ್ತಾನೆ.

ಎದ್ದು ಬರುತ್ತಿದ್ದ ಹೊಸ ತೇಜಸ್ಸಿನಿಂದ ಹೊಳೆಯುತ್ತಿದ್ದ ಆ ಬ್ರಾಹ್ಮಣನನ್ನು ನೋಡಿ ಕುಮಾರನು 'ತಾತ! ತಾತಾ!' ಎನ್ನುತ್ತಾ ಓಡಿ ಹೋಗಿ ತಬ್ಬಿಕೊಳ್ಳುತ್ತಾನೆ. ಮಾತಿಲ್ಲದ ಹರ್ಷದಿಂದ ಕಣ್ಣೀರಿಡುತ್ತಾ ಬ್ರಾಹ್ಮಣನು ಮಗನನ್ನು ರಾಮನ ಹತ್ತಿರ ಕರೆದುಕೊಂಡು ಬರುತ್ತಾನೆ. ಬ್ರಾಹ್ಮಣನು ಮಾತೇ ಹೊರಡದವನಾಗಿ 'ಕಂದಾ, ಸೀತಾಪತಿಗೆ, ರಾಜರಾಜೇಂದ್ರನಿಗೆ, ಶ್ರೀರಾಮಚಂದ್ರನಿಗೆ, ನಮ್ಮಿಬ್ಬರನ್ನೂ ರಕ್ಷಿಸಿದವರಿಗೆ ಕೈಮುಗಿ' ಎನ್ನುತ್ತಾನೆ. ಕುಮಾರನು ಹಿಗ್ಗಿ ಕೈಮುಗಿಯುತ್ತಾನೆ. ಶ್ರೀರಾಮನು ಅವನನ್ನು ಎತ್ತಿ ಮುದ್ದಾಡಿ, ಶಂಬೂಕ ಋಷಿಯನ್ನು ತೋರಿಸುತ್ತಾನೆ. 'ದ್ವಿಜಕುಮಾರ, ಆ ಮಹಾತಪಸ್ವಿಗೆ ನಮಸ್ಕರಿಸು. ಋಷಿಕೃಪೆಯಿಂದ ನೀನು ಈಗ ದಿಟವಾಗಿಯೂ ದ್ವಿಜನಾದೆ ತಪಸ್ಸು ತಾನು ಇರುವ ಎಡೆಯಲ್ಲಿಯೆ ದೂರಕರ್ಮಿ!' ಎನ್ನುತ್ತಾನೆ. ಕುಮಾರನು ಕೈಮುಗಿಯುತ್ತಾನೆ. 'ನಿನ್ನ ಕೈಗಳೇ ನಿನ್ನನ್ನು ಎತ್ತಿರುವ ನನ್ನ ಕೈಗಳಾಗಲಿ, ಎಲ್ಲರಿಗೂ ಶ್ರೇಯಸ್ಸಾಗಲಿ ! ರಾಜ್ಯವು ನಿರ್ವಿಘ್ನವಾಗಲಿ ! ಎನ್ನುತ್ತಾನೆ.

## ಪರಾಮರ್ಶನ ಗ್ರಂಥಗಳು


1. ಕುವೆಂಪು: ಶೂದ್ರತಪಸ್ವಿ, ಉದಯರವಿ ಪ್ರಕಾಶನ, ಮೈಸೂರು– 1987
2. ಅರವಿಂದ ಮಾಲಗತ್ತಿ (ಸಂ.): ಕುವೆಂಪು ಕೃತಿ ವಿಮರ್ಶೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2006.
3. ಬಸವರಾಜ ಸಬರದ: ಕುವೆಂಪು ನಾಟಕಗಳಲ್ಲಿ ದಲಿತ ಪ್ರಜ್ಞೆ (ಲೇಖನಗಳು), ಸಂಕ್ರಮಣ, 1984.
4. ಜವರೇಗೌಡ ದೇ.: ಕುವೆಂಪು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ–2006.
5. ಮಳಲಿ ವಸಂತ ಕುಮಾರ್: ಕುವೆಂಪು ನಾಟಕಗಳು– ಒಂದು ಅಧ್ಯಯನ, ಪುಸ್ತಕ ಪ್ರಕಾಶನ, ಮೈಸೂರು, 2001.